# ಚಳ್ಳಕೆರೆ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿರವರ ನ್ಯಾಯಾಲಯ

ಅಸಲು ದಾವಾ ನಂ. 255/2013

<u>ವಾದಿಯರು</u> ವಿರುದ್ಧ <u>ಪ್ರತಿವಾದಿಯರು</u>

ಚೌಟುಓಬಯ್ಯ ಮತ್ತೊಬ್ಬರು ಪಿ.ಬಿ.ಬೋರಮುತ್ತಿ ಇತರರು PW1

## ವಾದಿಯರ ಪರ ಮುಖ್ಯ ವಿಚಾರಣೆಯನ್ನೊಳಗೊಂಡ ಪ್ರಮಾಣ ಪತ್ರದ ರೀತ್ಯಾ

Prl. Civil Judge & J.M.F.C. Court CHALLAKERE.

Oath Commissioner Court of the Civil Judge (Sr. Dn.) & JMFC, Challakere

ಹೆಸರು : ಸಿ.ಓ.ಬೋರಯ್ಯ
ತಂದೆ : ಓಬಯ್ಯ
ವಯಸ್ಸು : ಸುಮಾರು 54 ವರ್ಷ
ವೃತ್ತಿ : ವ್ಯವಸಾಯ,
ವಾಸ : ನಲಗೇತನಹಟ್ಟಿ ಗ್ರಾಮ, ನಾಯಕನಹಟ್ಟಿ ಹೋಬಳಿ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.

ಸಿ.ಓ.ಬೋರಯ್ಯ ಬಿನ್ ಓಬಯ್ಯ, ವಯಸ್ಸು ಸುಮಾರು 54 ವರ್ಷಗಳು, ವ್ಯವಸಾಯ, ನಲಗೇತನಹಟ್ಟಿ ಗ್ರಾಮ, ನಾಯಕನಹಟ್ಟಿ ಹೋಬಳಿ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಆದ ನಾನು ಪ್ರಮಾಣ ಪೂರ್ವಕವಾಗಿ ಹೇಳುವುದೇನೆಂದರೆ,

ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲ್ಲೂಕು, ನಾಯಕನಹಟ್ಟಿ ಹೋಬಳಿ, ನಲಗೇತನಹಟ್ಟಿ ಗ್ರಾಮದಲ್ಲಿ ಚನ್ನಕೇಶವಸ್ವಾಮಿ ದೇವರು ಇದ್ದು, ಚನ್ನಕೇಶವಸ್ವಾಮಿ ದೇವರು ಬಹಳ ಪುರಾತನ ಕಾಲದ ದೇವರಾಗಿದ್ದು, ಸದರಿ ಚನ್ನಕೇಶವಸ್ವಾಮಿ ದೇವರಿಗೆ ನಾಯಕ ಜನಾಂಗಕ್ಕೆ ಸೇರಿದವರು ಭಕ್ತಾದಿಗಳಾಗಿದ್ದು, ಸದರಿ ದೇವರನ್ನು ಪುರಾತನ ಕಾಲದಿಂದಲೂ ಅಂದರೆ ತಲೆತಲಾಂತರಗಳಿಂದಲೂ ಸದರಿ ನಾಯಕ ಜನಾಂಗದವರು ಪೂಜೆ ಪುನಸ್ಕಾರಗಳನ್ನು ಮಾಡಿಕೊಳ್ಳುತ್ತಾ ಬಂದವರಾಗಿದ್ದು, ಸದರಿ ದೇವರನ್ನು ಚನ್ನಕೇಶವಸ್ವಾಮಿ ದೇವಸ್ಥಾನದಲ್ಲಿ ಈ ದೇವರನ್ನು ಇಡಲಾಗಿದ್ದು, ಈ ದೇವಸ್ಥಾನಕ್ಕೆ ಸಂಬಂಧಪಟ್ಟ ಎಲ್ಲಾ ಪೂಜೆ ಪುನಸ್ಕಾರ ಸಂಪ್ರದಾಯಗಳು ನಾಯಕ ಜನಾಂಗದವರ

ಸಿ.ಓ. ಬೋರಯ್ಯ

No of Corrections. Nil

Oath Commissioner
Court of the Civil Judge (Sr. Dn.) & JMFC, Challakere

ಪ್ರಕಾರವೇ ನಡೆದುಕೊಳ್ಳುತ್ತಾ ಬಂದಿದ್ದು, ಈ ಹಿಂದಿನಿಂದಲೂ ಕೂಡ ಈ ದೇವಸ್ಥಾನವು ನಾಯಕ ಜನಾಂಗದ ಭಕ್ತಾದಿಗಳನ್ನು ಹೊಂದಿದ್ದು, ಈ ದೇವಸ್ಥಾನದ ಆಡಳಿತ ಮೇಲ್ವಿಚಾರಣೆ, ಪೂಜೆ ಪುನಸ್ಕಾರಗಳು ಇನ್ನಿತರೆ ಎಲ್ಲಾ ವಿಧಿ ವಿಧಾನಗಳು ಆಚರಣೆಗಳು ಎಲ್ಲವೂ ಕೂಡ ಈ ಹಿಂದಿನಿಂದಲೂ ನಡೆದುಕೊಂಡು ಬಂದಂತಹ ಪದ್ಧತಿಯ ಪ್ರಕಾರವೇ ನಾಯಕ ಜನಾಂಗದವರೇ ನಡೆಸಿಕೊಳ್ಳುತ್ತಾ ಬಂದವರಾಗಿರುತ್ತಾರೆ. ಈ ಸದರಿ ಚನ್ನಕೇಶವಸ್ವಾಮಿ ದೇವಸ್ಥಾನಕ್ಕೆ ಸಂಬಂಧಪಟ್ಟಂತೆ ಎಲ್ಲಾ ವ್ಯವಹರಣೆಗಳು ಪೂಜಾ ಕಾರ್ಯಕ್ರಮಗಳು ಆಚರಣೆಗಳು ಇನ್ನಿತರೆ ಎಲ್ಲಾ ಕಾರ್ಯಕ್ರಮಗಳು ಸಹ ನಾಯಕ ಜನಾಂಗದವರೇ ನಿರ್ವಹಿಸಿಕೊಂಡು ಬಂದವರಾಗಿರುತ್ತಾರೆ.

ಈ ಚನ್ನಕೇಶವಸ್ವಾಮಿ ದೇವಸ್ಥಾನದಲ್ಲಿ ದೇವರುಗಳಿಗೆ ಹಬ್ಬ ಹರಿದಿನಗಳಲ್ಲಿ ಮತ್ತು ಪ್ರತಿ ಹುಣ್ಣಿಮೆಯಲ್ಲಿ ಹಾಗೂ ಪ್ರತಿ ಅಮಾವಾಸ್ಯೆಯಲ್ಲಿ ಎಲ್ಲಾ ದೇವರುಗಳಿಗೆ ಸಂಪ್ರದಾಯದಂತೆ ತಲೆ ತಲಾಂತರದಿಂದ ನಡೆದುಕೊಂಡು ಬಂದಂತೆ ಪೂಜಾ ಕಾರ್ಯಕ್ರಮಗಳು ನಡೆದುಕೊಂಡು ಬಂದಿರುತ್ತವೆ. ಈ ಹಿಂದೆ ಪುರಾತನ ಕಾಲದಲ್ಲಿ ಈ ಚನ್ನಕೇಶವಸ್ವಾಮಿ ದೇವರಿಗೆ ದೇವಸ್ಥಾನದ ಗುಡಿಸಲುಉಳ್ಳ ದೇವಸ್ಥಾನವಾಗಿದ್ದು, ಈಗ್ಗೆ ಸುಮಾರು 40 ವರ್ಷಗಳ ಹಿಂದೆಯೇ ಕಲ್ಲುಗಳಿಂದ ಕಟ್ಟಲ್ಪಟ್ಟಿರುತ್ತದೆ.

ಈ ಚನ್ನಕೇಶವಸ್ವಾಮಿ ದೇವರು ಸುಮಾರು 20 ವರ್ಷಗಳಿಗೂ ಮೇಲ್ಪಟ್ಟು ಹಳೆಯ ದೇವರಾಗಿದ್ದು, ಸದರಿ ದೇವರು ಚನ್ನಕೇಶವ ದೇವಸ್ಥಾನದಲ್ಲಿದ್ದು, ಅದರೊಂದಿಗೆ ಗಾದ್ರಿದೇವರು, ಮಂದಬೊಮ್ಮಯ್ಯ ದೇವರು ದೊಡ್ಡಮಾರಮ್ಮ ದೇವರು ಪೂಜಿಸಲ್ಪಡುತ್ತಿದ್ದು, ಅದರೊಂದಿಗೆ ನಲಗೇತನ ಮುತ್ತಯ್ಯಗಳ ದೇವರು (ಬಸವಗಳು) ಇವುಗಳಿಗೂ ಸಹ ಪುರಾತನ ಕಾಲದಿಂದಲೂ ಸಂಪ್ರದಾಯದ ಪ್ರಕಾರ ಪೂಜೆ ಪುನಸ್ಕಾರಗಳು ನಡೆಯುತ್ತಾ ಬಂದಿರುತ್ತವೆ.

ಈ ಚನ್ನಕೇಶವಸ್ವಾಮಿ ದೇವಸ್ಥಾನಕ್ಕೆ ಸಂಬಂಧಪಟ್ಟಂತೆ ಎ) ಯಜಮಾನರು, ಬಿ) ಪೂಜಾರಿ ವಂಶಸ್ಥರು, ಸಿ) ಹಿರಿಯರು ಡಿ) ಕುಲಸಾವಿರದವರು ಮತ್ತು ಇ) ಕೋಮುದಾರರು ಮತ್ತು ಗುಡಿಕಟ್ಟಿಗೆ ಸಂಬಂಧಪಟ್ಟಂತಹ ಎಲ್ಲಾ ಭಕ್ತಾದಿಗಳೂ ಇರುತ್ತಾರೆ. ಈ ದೇವಸ್ಥಾನಕ್ಕೆ ಸಂಬಂಧಪಟ್ಟಂತೆ ಮೇಲ್ಕಂಡಂತೆ ಹೇಳಿರುವಂತಹ ಎಲ್ಲರಿಗೂ ಸಹ ಕೆಲಸ ಕಾರ್ಯ, ಕರ್ತವ್ಯಗಳನ್ನು, ಜವಾಬ್ದಾರಿಗಳನ್ನು ಗುರುತಿಸಿದ್ದು, ಆ ಪ್ರಕಾರವೇ ಅವರವರ ಬಾಬ್ತು ಕೆಲಸ ಕಾರ್ಯಗಳನ್ನು ಜವಾಬ್ದಾರಿಗಳನ್ನು ಸಂಪ್ರದಾಯದ ಪ್ರಕಾರ ಮಾಡಿಕೊಂಡು ಬಂದ ರೀತಿಯಲ್ಲಿಯೇ ಆಯಾ ವಂಶಸ್ಥರು

ತಿ. ಓ. ಬೋರಯ್ಯ

No of Corrections..nil

ಆಯಾ ಸಂಪ್ರದಾಯದ ಪ್ರಕಾರ ಕ್ರಮವಾಗಿ ತಲೆ ತಲಾಂತರಗಳಿಂದಲೂ ನಿರ್ವಹಿಸಿಕೊಂಡು ಬಂದಿರುತ್ತಾರೆ.

Oath Commissioner
Court of the Civil Judge (Sr. Dn.) & JMFC, Challakere

ಈ ಚನ್ನಕೇಶವಸ್ವಾಮಿ ದೇವಸ್ಥಾನಕ್ಕೆ ಸಂಬಂಧಪಟ್ಟಂತೆ ಪೂಜಾ ಕಾರ್ಯಕ್ರಮಗಳೂ, ವಿಧಿ ವಿಧಾನಗಳು ಇನ್ನಿತರೆ ಯಾವುದೇ ತೆರನಾದ ಕೆಲಸ ಕಾರ್ಯಗಳು ಇನ್ನಿತರೆ ವಂಶವಾಹಿನಿ ಅಥವಾ ಇನ್ನಿತರೆ ಏಕಸ್ವಾಮ್ಯ ಹಕ್ಕು ಆಗಿರುವುದಿಲ್ಲ. ಸದರಿ ಸಂಪ್ರದಾಯದ ಪ್ರಕಾರ ದೇವಸ್ಥಾನಕ್ಕೆ ಸಂಬಂಧಪಟ್ಟಂತಹ ಎಲ್ಲಾ ವಂಶವಾಹಿನಿಗಳು ಯಾವುದೇ ಜವಾಬ್ದಾರಿ ಅಥವಾ ಪೂಜಾ ಕಾರ್ಯಕ್ರಮ ಅಥವಾ ಕೆಲಸ ಕಾರ್ಯಗಳನ್ನು ನಿರ್ವಹಿಸಿಕೊಂಡು ಹೋಗಬೇಕಾದರೆ ಸದರಿ ದೇವಸ್ಥಾನಕ್ಕೆ ಸಂಬಂಧಪಟ್ಟಂತಹ ಇನ್ನಿತರೆ ಎಲ್ಲಾ ವಂಶಸ್ಥರೂ ಅಂದರೆ ವಂಶವಾಹಿನಿಯವರು ಸಮ್ಮತಿ ಒಪ್ಪಿಗೆ ಕೊಡುವುದು ಅಗತ್ಯವಾಗಿರುತ್ತದೆ.

ಈ ಚನ್ನಕೇಶವಸ್ವಾಮಿ ದೇವಸ್ಥಾನಕ್ಕೆ ಸಂಬಂಧಪಟ್ಟಂತೆ ತಲೆ ತಲಾಂತರಗಳಿಂದ ನಡೆದುಕೊಂಡು ಬಂದಂತಹ ಸಂಪ್ರದಾಯದ ಪ್ರಕಾರ ದೇವಸ್ಥಾನದ ಹಿರಿಯರು, ಪೂಜಾರಿಗಳು, ಪೂಜಾರಿಗಳ ಅಣ್ಣತಮ್ಮಂದಿರು ಕುಲಸಾವಿರದವರು ಹಾಗೂ ಕೋಮುದಾರರು ಇವರೆಲ್ಲರೂ ಈ ಹಿಂದೆ ದೇವರುಗಳಿಗೆ ಸಂಬಂಧಪಟ್ಟಂತಹ ಪೂಜಾ ಕಾರ್ಯಕ್ರಮಗಳಿಗೆ ಸಂಪ್ರದಾಯಗಳಿಗೆ, ವಿಧಿ ವಿಧಾನಗಳಿಗೆ ನಡೆದುಕೊಳ್ಳದೇ ಯಾರೊಬ್ಬರ ಕೆಲಸ ಕಾರ್ಯವನ್ನೂ ಬೇರೆಯವರು ಅಡ್ಡಿ ಮಾಡದಂತೆ ಎಲ್ಲರೂ ಸಮನಾಗಿ ದೇವಸ್ಥಾನಕ್ಕೆ ಸಂಬಂಧಪಟ್ಟ ಕೆಲಸ ಕಾರ್ಯಗಳನ್ನು ಸುಗಮವಾಗಿ ನಿರ್ವಹಿಸಿಕೊಂಡು ಹೋಗತಕ್ಕದ್ದಾಗಿರುತ್ತದೆ.

ಸದರಿ ಚನ್ನಕೇಶವಸ್ವಾಮಿ ದೇವಸ್ಥಾನಕ್ಕೆ ಸಂಬಂಧಪಟ್ಟಂತೆ ನಾವೇ ಹಿರಿಯ ಕುಟುಂಬದ ಮನೆಯವರಾಗಿದ್ದು, ಅಂದರೆ ದೇವಸ್ಥಾನದ ಪೂಜಾರಿ ಕುಟುಂಬದ ಹಿರಿಯ ಕುಟುಂಬದಲ್ಲಿ ನಮ್ಮ ಕುಟುಂಬವೇ ಹಿರಿಯ ಕುಟುಂಬದ ಮನೆಯಾಗಿರುತ್ತದೆ. ಅಂದರೆ ದೇವಸ್ಥಾನದ ಹಿರಿಯ ಸದಸ್ಯರು ಅದರೊಂದಿಗೆ ಪೂಜಾರಿ ವಂಶಸ್ಥರು ನಮ್ಮವರೇ ಆಗಿರುತ್ತಾರೆ. ನಾವು ಈ ಚನ್ನಕೇಶವಸ್ವಾಮಿ ದೇವಸ್ಥಾನಕ್ಕೆ ಸಂಬಂಧಪಟ್ಟಂತೆ ಕಾಸು, ಮೀಸಲು ಮತ್ತು ಹಣ್ಣು ಹಂಪಲುಗಳನ್ನು ಹಬ್ಬ ಹರಿದಿನಗಳಲ್ಲಿ ಹುಣ್ಣಿಮೆ, ಅಮವಾಸ್ಯೆಗಳಲ್ಲಿ ದೇವರುಗಳಿಗೆ ಪ್ರಥಮವಾಗಿ ನಾವೇ ಈ ಎಲ್ಲಾ ಕೆಲಸ ಕಾರ್ಯಗಳನ್ನು ಮಾಡುವವರಾಗಿರುತ್ತೇವೆ. ದೇವಸ್ಥಾನದ ಹೊರಗಡೆ ಚನ್ನಕೇಶವಸ್ವಾಮಿ ದೇವರು ಅದರೊಂದಿಗೆ ಉಳಿದ ಎಲ್ಲಾ ದೇವರುಗಳ ಪೂಜೆ ಪುನಸ್ಕಾರಗಳು ಜೊತೆಗೆ ಗಂಗಾ ಪೂಜೆ ದೊಡ್ಡಮಾರಮ್ಮನ ಪೂಜೆ ಈ ಎಲ್ಲಾ ಪೂಜಾ ಕಾರ್ಯಗಳನ್ನು

No of Corrections.Nil

Oath Commissioner
Court of the Civil Judge (Sr. Dn.) & JMFC Challakere

ದೇವಸ್ಥಾನದ ಪೂಜೆ ಕಾರ್ಯಕ್ರಮಗಳನ್ನು ನಾವೇ ನೆರವೇರಿಸುವುದು ಗುರುತರ ಜವಾಬ್ದಾರಿ ನಮ್ಮದೇ ಆಗಿದ್ದು, ಮೊದಲಿನಿಂದಲೂ ಈ ಕೆಲಸ ಕಾರ್ಯಗಳನ್ನು ನಮ್ಮ ಹಿರಿಯರೇ ಸಂಪ್ರದಾಯದ ಪ್ರಕಾರ ನಡೆಸಿಕೊಂಡು ಬಂದಿರುತ್ತಾರೆ. ನಲಗೇತನ ವಂಶಸ್ಥರು ನಿಧನ ಹೊಂದಿದಲ್ಲಿ ಅವರ ಉತ್ತರ ಕ್ರಿಯಾದಿಗಳನ್ನೂ ಮಾಡುವ ಜವಾಬ್ದಾರಿ ನಮ್ಮದೇ ಆಗಿರುತ್ತದೆ.

1ನೇ ಪ್ರತಿವಾದಿ ಪಿ.ಬಿ.ಬೋರಮುತ್ತಿ ತಂದೆಯಾದ ಪೂಜಾರಿ ಬೋರಯ್ಯ ಬಿನ್ ಓಬಯ್ಯ ಇವರುಗಳೇ ಈ ಚನ್ನಕೇಶವಸ್ವಾಮಿ ದೇವಸ್ಥಾನದ ಪೂಜಾ ಕಾರ್ಯಗಳನ್ನು ಸುಮಾರು 40 ವರ್ಷಗಳಿಗೂ ಮೇಲ್ಪಟ್ಟು ಮಾಡುತ್ತಾ ಬಂದಿದ್ದು, ಈ ಸದರಿ ಪೂಜಾ ಸುಮಾರು 7-8 ತಿಂಗಳ ಹಿಂದೆ ನಿಧನ ಹೊಂದಿದ್ದು, ಅದಕ್ಕಿಂತ ಪೂರ್ವದಲ್ಲಿ ದೇವಸ್ಥಾನದ ಪೂಜಾರಿಯಾದ ಪೂಜಾರಿ ಬೋರಯ್ಯ ಬಿನ್ ಓಬಯ್ಯನವರು ವಯಸ್ಸಾದ ನಿಮಿತ್ತ ವಿಶ್ರಾಂತಿಯನ್ನು ಪಡೆಯುತ್ತಿದ್ದ ಕಾರಣ ಸದರಿ ಚನ್ನಕೇಶವಸ್ವಾಮಿ ದೇವಸ್ಥಾನದ ಚನ್ನಕೇಶವಸ್ವಾಮಿ ಮತ್ತು ಇತರೆ ದೇವರುಗಳು ದೇವಸ್ಥಾನದ ಹೊರಗಡೆ ಬಂದಿರುವುದಿಲ್ಲ ಹಾಗೂ ದೇವಸ್ಥಾನದ ಪೂಜಾ ವಿಧಿ ವಿಧಾನಗಳು ನಡೆದಿರುವುದಿಲ್ಲ.

ದೇವಸ್ಥಾನದ ಪೂಜಾರಿಯಾದ ಪೂಜಾರಿ ಬೋರಯ್ಯ ಬಿನ್ ಓಬಯ್ಯನವರ ನಿಧನದ ತರುವಾಯ ಸದರಿ ಚನ್ನಕೇಶವಸ್ವಾಮಿ ದೇವಸ್ಥಾನಕ್ಕೆ ಸಂಬಂಧಪಟ್ಟಂತೆ ಸಂಪ್ರದಾಯ ಬದ್ಧವಾಗಿ ಪೂಜಾರಿಯ ನೇಮಕವಾಗಿರುವುದಿಲ್ಲ.

ಚನ್ನಕೇಶವಸ್ವಾಮಿ ದೇವಸ್ಥಾನಕ್ಕೆ ಸಂಬಂಧಪಟ್ಟಂತೆ ಸಂಪ್ರದಾಯದ ಪ್ರಕಾರ ಈ ಹಿಂದಿನಿಂದಲೂ ನಡೆದುಕೊಂಡು ಬಂದಂತಹ ನಮ್ಮ ಪೂಜಾ ಕಾರ್ಯಕ್ರಮಗಳನ್ನು ಧಿಕ್ಕರಿಸುವ ಅಡ್ಡಿ ಪಡಿಸುವ, ಬೇರೆಯವರಿಗೆ ಹಸ್ತಾಂತರಿಸುವ ಅಲ್ಲಗೆಳೆಯುವ ಹಕ್ಕು, ಅಧಿಕಾರ, ಪ್ರತಿವಾದಿಯರಿಗಾಗಲೀ ಅಥವಾ ಬೇರೆ ಯಾರಿಗೇ ಆಗಲೀ ಇರುವುದಿಲ್ಲ.

ಹೀಗಿರುವಾಗ ಚನ್ನಕೇಶವಸ್ವಾಮಿ ದೇವಸ್ಥಾನಕ್ಕೆ ಸಂಬಂಧಪಟ್ಟಂತೆ ನಮಗೆ ಇರುವಂತಹ ಸಂಪ್ರದಾಯದ ಪ್ರಕಾರ ತಲೆ ತಲಾಂತರಗಳಿಂದ ನಡೆದುಕೊಂಡು ಬಂದಂತಹ ಪೂಜಾ ಕಾರ್ಯಕ್ರಮಗಳಿಗೆ ಸಂಬಂಧಪಟ್ಟಂತೆ ನಮಗೆ 1 ರಿಂದ 6ರವರೆಗಿನ ಪ್ರತಿವಾದಿಯರು ಒಬ್ಬರಿಗೊಬ್ಬರು ಷರೀಕಾಗಿ ದೇವಸ್ಥಾನಕ್ಕೆ ಸಂಬಂಧಪಟ್ಟಂತಹ ನಾವು ನಿರ್ವಹಿಸಬೇಕಾದ ಪೂಜಾ ಕಾರ್ಯಕ್ರಮಗಳಿಗೆ ಸಂಬಂಧಪಟ್ಟಂತೆ ಪ್ರತಿವಾದಿಯರಾದ ಪಿ.ಬಿ.ಬೋರಮುತ್ತಿ, ಚಿತ್ರಯ್ಯ, ಪೂಜಾರಿ ಚಿತ್ರಯ್ಯ, ಪೂಜಾರಿ ಓಬಯ್ಯ, ಜಗದೀಶ ಮತ್ತು ಚನ್ನಕೇಶವ ಇವರುಗಳು ಅಡ್ಡಿ ಆತಂಕ

ಪಿ.ಟಿ. ಬೋರಯ್ಯ

No of Corrections. Nil

ಉಂಟು ಮಾಡುವುದಕ್ಕೆ ಸಂಬಂಧಪಟ್ಟಂತೆ ನಾವು ನಡೆಸಿಕೊಂಡು ಬಂದ ಕಾರ್ಯಕ್ರಮಗಳನ್ನು ತಾವೇ ಮಾಡಿಕೊಂಡು ಹೋಗುವುದಾಗಿ ದೌರ್ಜನ್ಯದಿಂದ ಪ್ರತಿವಾದಿಯರಾದ ಪಿ.ಬಿ.ಬೋರಮುತ್ತಿ, ಚಿತ್ರಯ್ಯ, ಪೂಜಾರಿ ಚಿತ್ರಯ್ಯ, ಪೂಜಾರಿ ಓಬಯ್ಯ, ಜಗದೀಶ ಮತ್ತು ಚನ್ನಕೇಶವ ಇವರುಗಳು ಬೆದರಿಕೆ ಹಾಕಿದ್ದರಿಂದ ನಾವು ಈ ಬಗ್ಗೆ ಈ ರೀತಿ ಸಂಪ್ರದಾಯಗಳಿಗೆ ವಿಧಿ ವಿಧಾನಗಳಿಗೆ ವಿರುದ್ಧವಾಗಿ ನಡೆದುಕೊಳ್ಳದೇ ನಮ್ಮ ಕುಟುಂಬವು ತಲೆ ತಲಾಂತರಗಳಿಂದ ನಡೆದುಕೊಂಡು ಬಂದಂತಹ ಪೂಜಾ ಕಾರ್ಯಕ್ರಮಗಳಿಗೆ ಯಾವುದೇ ರೀತಿಯ ಅಡ್ಡಿ, ಆತಂಕ ಉಂಟು ಮಾಡಬಾರದೆಂದು ನಾವು ಹೇಳಿದರೂ ಸಹ ಪ್ರತಿವಾದಿಯರಾದ ಪಿ.ಬಿ.ಬೋರಮುತ್ತಿ, ಚಿತ್ರಯ್ಯ, ಪೂಜಾರಿ ಚಿತ್ರಯ್ಯ, ಪೂಜಾರಿ ಓಬಯ್ಯ, ಜಗದೀಶ ಮತ್ತು ಚನ್ನಕೇಶವ ಇವರುಗಳು ನಿರ್ಲಕ್ಷ್ಯ ಮಾಡಿದ್ದರಿಂದ ನಾವು ಬೇರೆ ಮಾರ್ಗೋಪಾಯವಿಲ್ಲದೇ ಪ್ರತಿವಾದಿಯರಾದ ಪಿ.ಬಿ.ಬೋರಮುತ್ತಿ, ಚಿತ್ರಯ್ಯ, ಪೂಜಾರಿ ಚಿತ್ರಯ್ಯ, ಪೂಜಾರಿ ಓಬಯ್ಯ, ಜಗದೀಶ ಮತ್ತು ಚನ್ನಕೇಶವ ಇವರುಗಳ ದೌರ್ಜನ್ಯದಿಂದ ಸಂಪ್ರದಾಯ ವಿರೋಧದ ಚಟುವಟಿಕೆಗಳನ್ನು ತಡೆ ಹಿಡಿಯುವ ದೃಷ್ಟಿಯಿಂದ ನಾವು ಪ್ರತಿವಾದಿಯರಾದ ಪಿ.ಬಿ.ಬೋರಮುತ್ತಿ, ಚಿತ್ರಯ್ಯ, ಪೂಜಾರಿ ಚಿತ್ರಯ್ಯ, ಪೂಜಾರಿ ಓಬಯ್ಯ, ಜಗದೀಶ ಮತ್ತು ಚನ್ನಕೇಶವ ಇವರುಗಳ ವಿರುದ್ಧ ಈ ದಾವಾ ತಂದಿರುತ್ತೇವೆ.

ಸದರಿ ಚನ್ನಕೇಶವಸ್ವಾಮಿ ದೇವಸ್ಥಾನಕ್ಕೆ ಸಂಬಂಧಪಟ್ಟಂತೆ ಪ್ರತಿವಾದಿಯರಾದ ಪಿ.ಬಿ.ಬೋರಮುತ್ತಿ, ಚಿತ್ರಯ್ಯ, ಪೂಜಾರಿ ಚಿತ್ರಯ್ಯ, ಪೂಜಾರಿ ಓಬಯ್ಯ, ಜಗದೀಶ ಮತ್ತು ಚನ್ನಕೇಶವ ಇವರುಗಳು ಪೂಜಾರಿ ವಂಶಸ್ಥರಲ್ಲಿ ಒಬ್ಬರಾಗಿರುತ್ತಾರೆಯೇ ವಿನಃ ಅವರಿಗೆ ನಮ್ಮ ಪೂಜಾ ಕಾರ್ಯಕ್ರಮಗಳನ್ನು ಅಡ್ಡಿ ಪಡಿಸುವ ಧಿಕ್ಕರಿಸುವ ಹಕ್ಕು ಅಧಿಕಾರ ಇರುವುದಿಲ್ಲ.

2013ನೇ ಇಸವಿಯ ದೀಪಾವಳಿ ಹಬ್ಬದಲ್ಲಿ ನಾವು ಚನ್ನಕೇಶವಸ್ವಾಮಿ ದೇವಸ್ಥಾನಕ್ಕೆ ಸಂಬಂಧಪಟ್ಟಂತೆ ದೇವರುಗಳಿಗೆ ಕಾಸು ಮೀಸಲು (ಹಣ್ಣು ಹಂಪಲು) ಇಡುವುದರ ಜೊತೆಗೆ ಪೂಜೆ ಮಾಡುವುದಕ್ಕೆ ಪ್ರತಿವಾದಿಯರಾದ ಪಿ.ಬಿ.ಬೋರಮುತ್ತಿ, ಚಿತ್ರಯ್ಯ, ಪೂಜಾರಿ ಚಿತ್ರಯ್ಯ, ಪೂಜಾರಿ ಓಬಯ್ಯ, ಜಗದೀಶ ಮತ್ತು ಚನ್ನಕೇಶವ ಇವರುಗಳು ದೌರ್ಜನ್ಯದಿಂದ ಅಕ್ರಮವಾಗಿ ಅಡ್ಡಿ, ಆತಂಕ ಉಂಟು ಮಾಡುವುದರ ಜೊತೆಗೆ ಇನ್ನು ಮುಂದೆ ಯಾವುದೇ ಕಾರ್ಯಕಲಾಪಗಳನ್ನು ನಾವು ಮಾಡಬಾರದೆಂದು ಪ್ರತಿವಾದಿಯರಾದ ಪಿ.ಬಿ.ಬೋರಮುತ್ತಿ, ಚಿತ್ರಯ್ಯ, ಪೂಜಾರಿ ಚಿತ್ರಯ್ಯ, ಪೂಜಾರಿ ಓಬಯ್ಯ, ಜಗದೀಶ ಮತ್ತು ಚನ್ನಕೇಶವ ಇವರುಗಳು ದೌರ್ಜನ್ಯದಿಂದ ಬೆದರಿಕೆ

No of Corrections.Nil ಸಿ.ಘ.ಬೋರಯ್ಯ

Oath Commissioner Court of the Civil Judge (Sr. Dn.) & JMFC Challakere

ಇರುವುದರಿಂದ ಬೇರೆ ಮಾರ್ಗೋಪಾಯವಿಲ್ಲದೇ ನಾನು ಮತ್ತು ಚೌಟುಓಬಯ್ಯ ಈ ದಾವಾವನ್ನು ಸನ್ನಿಧಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇವೆ.

ನಮ್ಮ ತಾತಂದಿರು ಯಾವತ್ತೂ ಸಹ ಪೂಜಾರಿಕೆಯನ್ನು ಮಾಡಿರುವುದಿಲ್ಲವೆಂದು ಅದೇ ರೀತಿ ಪೂಜಾರಿ ಚಿತ್ರಯ್ಯ ಮತ್ತು ಪೂಜಾರಿ ಓಬಯ್ಯ ಇವರುಗಳು ಹೇಳುವುದು ಶುದ್ಧ ಸುಳ್ಳಿನಿಂದ ಕೂಡಿರುತ್ತದೆ. ಪೂಜಾರಿ ಚಿತ್ರಯ್ಯನ ತಾತನವರಾದ ಪೂಜಾರಿ ಚಿತ್ರಯ್ಯನೇ ತಲೆ ತಲಮಾರುಗಳಿಂದ ಪೂಜಾರಿಕೆಯನ್ನು ಮಾಡಿಕೊಂಡು ' ಬಂದವರಾಗಿರುತ್ತಾರೆಂದು ನ್ಯಾಯಾಲಯದ ಪ್ರಕರಣಗಳಲ್ಲಿ ರುಜುವಾತು ಪಡಿಸಿರುತ್ತಾರೆಂದು, ಆ ತಾತನವರು ನಿಧನರಾದ ನಂತರ ಪೂಜಾರಿ ಚಿತ್ರಯ್ಯನವರೇ ಪೂಜಾರಿಕೆಯನ್ನು ಮಾಡಿಕೊಂಡು ಬಂದಿರುತ್ತಾರೆಂದು ಪ್ರತಿವಾದಿಯರಾದ ಪೂಜಾರಿ ಚಿತ್ರಯ್ಯ, ಪೂಜಾರಿ ಓಬಯ್ಯ ಹಾಗೂ ಜಗದೀಶ ಹೇಳುವುದು ಸುಳ್ಳಿನಿಂದ ಕೂಡಿರುತ್ತದೆ.

ಚನ್ನಕೇಶವಸ್ವಾಮಿ ದೇವರು ಮತ್ತು ಇತರೆ ದೇವರುಗಳಿಗೆ ಪೂಜಾರಿ ಚಿತ್ರಯ್ಯನ ತಾತನವರಾದ ಪೂಢಾರಿ ಚಿತ್ರಯ್ಯನೇ ಪಟ್ಟದ ಪೂಜಾರಿಯಾಗಿದ್ದು, ಆ ಸದರಿ ದೇವಸ್ಥಾನದ ಆಚಾರವಿಚಾರಗಳು, ಸಂಪ್ರದಾಯಗಳು, ಹಬ್ಬ ಹರಿದಿನಗಳು ಹಾಗೂ ವಿಶೇಷ ಪೂಜಾ ಕಾರ್ಯಕ್ರಮಗಳು ತಲೆ ತಲಾಂತರಗಳಿಂದ ನಡೆಯುತ್ತಾ ಬಂದಿದ್ದು, ಪೂಜೆ ಮಾಡುವುದು ಮತ್ತು ಕಾಸು ಮೀಸಲು ಪಡೆಯುವುದು ಹಾಗೂ ಉತ್ತರಾಧಿಕಾರಗಳನ್ನು ನೇಮಕ ಮಾಡುವುದು, ಈ ಎಲ್ಲಾ ಕೆಲಸಗಳನ್ನು ಪೂಜಾರಿ ಚಿತ್ರಯ್ಯನೇ ಮಾಡಿಕೊಂಡು ಬರುತ್ತಿದ್ದನೆಂದು ಹೇಳುವುದು ಶುದ್ಧ ಸುಳ್ಳಿನಿಂದ ಕೂಡಿರುತ್ತದೆ.

ನಂತರದಲ್ಲಿ ಪ್ರತಿವಾದಿಯರಾದ ಪೂಜಾರಿ ಚಿತ್ರಯ್ಯ ಮತ್ತು ಪೂಜಾರಿ ಓಬಯ್ಯ ಹಾಗೂ ಜಗದೀಶ ಇವರುಗಳೇ ದೇವಸ್ಥಾನದ ಪೂಜಾರಿಕೆಯನ್ನು ಮುಂದುವರೆಸಿಕೊಂಡು ಬಂದವರಾಗಿದ್ದು, ಪಟ್ಟದ ಪೂಜಾರಿ, ಪೂಜಾರಿ ಚಿತ್ರಯ್ಯನ ನಿಧನದ ನಂತರ ಅವರ ಅಣ್ಣ-ತಮ್ಮಂದಿರಾದ ಪೂಜಾರಿ ಬೋರಯ್ಯನಿಗೆ ಪೂಜಾ ಕಾರ್ಯಕ್ರಮಗಳನ್ನು ವಹಿಸಿದ್ದು, ಅವರುಗಳು ನಿಧನವಾದ ನಂತರದಲ್ಲಿ ಪ್ರತಿವಾದಿಗಳಾದ ಪೂಜಾರಿ ಬೋರಯ್ಯ ಮತ್ತು ಪೂಜಾರಿ ಓಬಯ್ಯ ಮತ್ತು ಜಗದೀಶ ಇವರುಗಳು ನಾಯಕ ಜನಾಂಗದ ಸಂಪ್ರದಾಯದಂತೆ ಗುಡಕಟ್ಟಿನ ಸಂಪ್ರದಾಯದಂತೆ ಪೂಜಾರಿಕೆಯನ್ನು ಮಾಡಿಕೊಂಡು ಬಂದಿರುತ್ತಾರೆಂದು ಪ್ರತಿವಾದಿ ಪೂಜಾರಿ ಚಿತ್ರಯ್ಯ

ತಿ. ಓ. ಬೋರಯ್ಯ

No of Corrections. Nil

Oath Commissioner
Court of the Civil Judge (Sr. Dn.) & JMFC, Challakere

ಮತ್ತು ಪೂಜಾರಿ ಓಬಯ್ಯ ಹಾಗೂ ಜಗದೀಶ ಹೇಳುವುದು ಶುದ್ಧ ಸುಳ್ಳಿನಿಂದ ಕೂಡಿರುತ್ತದೆ.

Oath Commissioner
Court of the Civil Judge (Sr. Dn.) & JMFC, Challakere

ಚನ್ನಕೇಶವಸ್ವಾಮಿ ದೇವಸ್ಥಾನಕ್ಕೆ ಸಂಬಂಧಪಟ್ಟಂತೆ ಪ್ರತಿವಾದಿಯರಾದ ಪೂಜಾರಿ ಚಿತ್ರಯ್ಯ ಮತ್ತು ಪೂಜಾರಿ ಓಬಯ್ಯ ಹಾಗೂ ಜಗದೀಶ ಇವರ ಕುಟುಂಬಗಳೇ ಹಿರಿಯ ಕುಟುಂಬವಾಗಿದ್ದು ಮತ್ತು ಹಿರಿಯ ಮನೆಯಾಗಿದ್ದು ಇವರುಗಳೇ ಪೂಜಾರಿ ವಂಶಸ್ಥರಾಗಿರುತ್ತಾರೆಂದು ಹೇಳುವುದು ಶುದ್ಧ ಸುಳ್ಳಿನಿಂದ ಕೂಡಿರುತ್ತದೆ.

ಚನ್ನಕೇಶವಸ್ವಾಮಿ ದೇವರು, ದೊಡ್ಡಮಾರಮ್ಮ ದೇವರು ಹಾಗೂ ಮುತ್ತಯ್ಯಗಳ ದೇವರುಗಳಿಗೆ ಪ್ರತಿವಾದಿಯರಾದ ಪೂಜಾರಿ ಚಿತ್ರಯ್ಯ ಮತ್ತು ಪೂಜಾರಿ ಓಬಯ್ಯ ಹಾಗೂ ಜಗದೀಶ ಇವರುಗಳೇ ಪೂಜಾರಿಕೆ ಮಾಡಿಕೊಂಡು ಬಂದಿದ್ದು, ಅವರುಗಳ ಪೂಜಾರಿಕೆಗೆ ವಿನಾಕಾರಣ ಅಡ್ಡಿ, ಆತಂಕ ತೊಂದರೆ ಪಡಿಸಿರುತ್ತಾರೆಂದು, ಆ ರೀತಿ ಅಡ್ಡಿ ಪಡಿಸುವ ಅಧಿಕಾರ ನಮಗೆ ಇರುವುದಿಲ್ಲವೆಂದು ಹಾಗೂ ತಲೆ ತಲಾಂತರಗಳಿಂದ ಪ್ರತಿವಾದಿಯರಾದ ಪೂಜಾರಿ ಚಿತ್ರಯ್ಯ ಮತ್ತು ಪೂಜಾರಿ ಓಬಯ್ಯ ಹಾಗೂ ಜಗದೀಶ ಇವರ ಕುಟುಂಬಗಳೇ ದೇವರುಗಳ ಪೂಜಾ ಕಾರ್ಯಕ್ರಮಗಳನ್ನು ನೆರವೇರಿಸುತ್ತಾ ಬಂದಿರುತ್ತಾರೆಂದು ಪ್ರತಿವಾದಿಯರಾದ ಪೂಜಾರಿ ಚಿತ್ರಯ್ಯ ಮತ್ತು ಪೂಜಾರಿ ಓಬಯ್ಯ ಹಾಗೂ ಜಗದೀಶ ಇವರು ಹೇಳುವುದು ಶುದ್ಧ ಸುಳ್ಳಿನಿಂದ ಕೂಡಿರುತ್ತದೆ.

ಪ್ರತಿವಾದಿಯರಾದ ಪೂಜಾರಿ ಚಿತ್ರಯ್ಯ ಮತ್ತು ಪೂಜಾರಿ ಓಬಯ್ಯ ಹಾಗೂ ಜಗದೀಶ ಇವರುಗಳು ಈ ದಾವಾಕ್ಕೆ ಸಂಬಂಧಪಟ್ಟಂತೆ ಸುಳ್ಳು ಅಂಶಗಳಿಂದ ಕೂಡಿದ ತಕರಾರನ್ನು ಸಲ್ಲಿಸಿರುತ್ತಾರೆ. ನಾನು ಮತ್ತು ಚೌಟು ಓಬಯ್ಯ ಇವರುಗಳು ಸಲ್ಲಿಸಿರುವಂತಹ ಕೇಸಿನ ಎಲ್ಲಾ ವಿಚಾರಗಳು ಸತ್ಯವಾಗಿವೆ ಎಂದು ಪ್ರತಿವಾದಿಯರಾದ ಪೂಜಾರಿ ಚಿತ್ರಯ್ಯ ಮತ್ತು ಪೂಜಾರಿ ಓಬಯ್ಯ ಹಾಗೂ ಜಗದೀಶ ಇವರುಗಳಿಗೆ ಗೊತ್ತಿದ್ದರೂ ಸಹಿತ ದುರುದ್ದೇಶದಿಂದ ಸುಳ್ಳು ಅಂಶಗಳಿಂದ ಕೂಡಿದ ತಕರಾರನ್ನು ಸಲ್ಲಿಸಿರುತ್ತಾರೆ.

ಪ್ರತಿವಾದಿಯರಾದ ಪೂಜಾರಿ ಚಿತ್ರಯ್ಯ ಮತ್ತು ಪೂಜಾರಿ ಓಬಯ್ಯ ಹಾಗೂ ಜಗದೀಶ ಇವರು ಸಲ್ಲಿಸಿರುವ ಕೇಸು ಸತ್ಯಸಂಗತಿಗಳಿಗೆ ದೂರವಾಗಿದ್ದು, ದುರುದ್ದೇಶದಿಂದ ಕೂಡಿರುವುದರಿಂದ ಯಾವುದೇ ಸೂಕ್ತ ಕಾರಣ ಇಲ್ಲದೇ ಎದುರು ಕೇಸು ಹಾಕಿರುವುದರಿಂದ ಆ ಎದುರುದಾವೆಯನ್ನು ವಜಾ ಮಾಡಬೇಕಾಗಿ ಪ್ರಾರ್ಥನೆ.

ತಿ. ಓ. ಬೋರಯ್ಯ

No of Corrections. Nil

Oath Commissioner
Court of the Civil Judge (Sr. Dn.) & JMFC, Challakere

1ನೇ ಪ್ರತಿವಾದಿ ಪಿ.ಬಿ.ಬೋರಮುತ್ತಿ, 2ನೇ ಪ್ರತಿವಾದಿ ಚಿತ್ರಯ್ಯ ಇವರುಗಳ ಹೆಂಡತಿಯರು ಈಗಲು ವಂಶಕ್ಕೆ ಸೇರಿದವರಾಗಿರುತ್ತಾರೆ. ಇದೇ ಕೇಸಿನ 5ನೇ ಪ್ರತಿವಾದಿಯಾದ ಜಗದೀಶ ಇವರುಗಳು ಗುಡ್ಡಪ್ಪ ವಂಶಕ್ಕೆ ಸೇರಿದ ಹೆಣ್ಣುಮಗಳ ಹೊಟ್ಟೆಯಲ್ಲಿ ಜನಿಸಿದವರಾಗಿರುತ್ತಾರೆ.

ಬರುಗುಲು ಮತ್ತು ಬೊಮ್ಮದೇವರು ಈ ವಂಶಕ್ಕೆ ಸೇರಿದ ಹೆಣ್ಣುಮಕ್ಕಳ ಹೊಟ್ಟೆಯಲ್ಲಿ ಹುಟ್ಟಿದ ಗಂಡು ಮಕ್ಕಳಿಗೆ ಮಾತ್ರ ಪೂಜಾರಿ ಪಟ್ಟ ಕಟ್ಟಲು ಅರ್ಹತೆ ಇರುತ್ತದೆ. ಈ ಎರಡು ವಂಶಗಳ ಹೊರತಾಗಿ ಬೇರೆ ವಂಶದಲ್ಲಿ ಹುಟ್ಟಿದಂತಹ ವ್ಯಕ್ತಿಗಳಿಗೆ ಪಟ್ಟದ ಪೂಜಾರಿಕೆ ಮಾಡಲು ಅರ್ಹತೆ ಇರುವುದಿಲ್ಲ.

ಪೂಜಾರಿ ಚಿತ್ರಯ್ಯನ ಹೆಂಡತಿ ಸೂರಮ್ಮ ಗುಡ್ಡಪ್ಪ ವಂಶಕ್ಕೆ ಸೇರಿದ ಹೆಣ್ಣುಮಗಳಾಗಿದ್ದರಿಂದ ಆಕೆಯ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗೆ ಪಟ್ಟದ ಪೂಜಾರಿಕೆ ನೀಡಲು ಬರುವುದಿಲ್ಲ ಎಂದು ತಕರಾರು ಮಾಡಿದ್ದು, ಮೃತ ಪೂಜಾರಿ ಬೋರಯ್ಯ ಬಿನ್ ಓಬಯ್ಯ ಇವರು ಬರುಗುಲು ಹೆಣ್ಣುಮಗಳ ವಂಶದಲ್ಲಿ ಹುಟ್ಟಿರುವುದರಿಂದ ಪೂಜಾರಿ ಬೋರಯ್ಯನನ್ನು ಪಟ್ಟದ ಪೂಜಾರಿ ಮಾಡಿದರು.

3 ರಿಂದ 5ನೇ ಪ್ರತಿವಾದಿಯರು ಸಲ್ಲಿಸಿರುವ ಎದುರುದಾವೆಯಲ್ಲಿ ಕೇಳಿರುವಂತಹ ಯಾವುದೇ ಪರಿಹಾರಗಳನ್ನು ಹೊಂದಲು ಪೂಜಾರಿ ಚಿತ್ರಯ್ಯ, ಪೂಜಾರಿ ಓಬಯ್ಯ ಹಾಗೂ ಜಗದೀಶ ಇವರುಗಳು ಅರ್ಹರಾಗಿರುವುದಿಲ್ಲ. ಸದರಿ ಪ್ರತಿವಾದಿಯರಿಗೆ ಕಾಸು ಮೀಸಲು ಪಡೆಯಲು ಹಾಗೂ ಉತ್ತರ ಕ್ರಿಯಾದಿಗಳನ್ನು ನೆರವೇರಿಸಲು ಹಾಗೂ ಪೂಜಾ ಕಾರ್ಯಕ್ರಮಗಳನ್ನು ನಿರ್ವಹಿಸಲು ಅವರಿಗೆ ಯಾವುದೇ ರೀತಿಯ ಹಕ್ಕು, ಅಧಿಕಾರ ಇರುವುದಿಲ್ಲ.

ನಾನು ಈ ಕೇಸಿಗೆ ಸಂಬಂಧಪಟ್ಟಂತೆ ಅಗತ್ಯ ದಾಖಲೆಗಳನ್ನು ಹಾಜರು ಪಡಿಸಿದ್ದು, ಸದರಿ ದಾಖಲೆಗಳನ್ನು ನನ್ನ ಪರ ನಿಶಾನೆಗಳಾಗಿ ಗುರುತಿಸಬೇಕಾಗಿ ಪ್ರಾರ್ಥನೆ.

ಆದ್ದರಿಂದ ದಯವಿಟ್ಟು ಘನ ಸನ್ನಿಧಿ ನ್ಯಾಯಾಲಯವು ನ್ಯಾಯೋದ್ದೇಶದಿಂದ ನಾವು ಸಲ್ಲಿಸಿರುವ ದಾವಾವನ್ನು ನಮ್ಮ ಪರ ತೀರ್ಪು ಮತ್ತು ಡಿಕ್ರಿ ಮಾಡಬೇಕಾಗಿ ಪ್ರಾರ್ಥನೆ ಮತ್ತು 3ನೇ ಪ್ರತಿವಾದಿ ಪೂಜಾರಿ ಚಿತ್ರಯ್ಯ, 4ನೇ ಪ್ರತಿವಾದಿ ಪೂಜಾರಿ

No of Corrections.Nil

ಓಬಯ್ಯ ಹಾಗೂ 5ನೇ ಪ್ರತಿವಾದಿ ಜಗದೀಶ ಇವರುಗಳು ಸಲ್ಲಿಸಿರುವ ಎದುರುದಾವೆಯನ್ನು ವಜಾ ಮಾಡಬೇಕಾಗಿ ಪ್ರಾರ್ಥನೆ.

ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಹೇಳುವುದೇನೆಂದರೆ, ಈ ಪ್ರಮಾಣ ಪತ್ರದ ಮೇಲಿನ ಹೆಸರು, ಕೆಳಗಿನ ಸಹಿ ಮತ್ತು ಎಲ್ಲಾ ಪ್ಯಾರಾಂಶಗಳು ನನಗೆ ಖುದ್ದು ತಿಳಿದ ಮಟ್ಟಿಗೆ ಸತ್ಯವಾಗಿರುತ್ತವೆ ಎಂದು ಪ್ರಮಾಣಿಕರಿಸುತ್ತೇನೆ.

ನನ್ನಿಂದ ಗುರುತಿಸಲ್ಪಟ್ಟಿದೆ.

ವಕೀಲರು.

ಸ್ಥಳ: ಚಳ್ಳಕೆರೆ. (1)

ದಿನಾಂಕ: 05.12.2015.

Oath Commissioner
Court of the Civil Judge (Sr. Dn.) & JMFC, Challakere

ಪ್ರಮಾಣಿಕರಿಸುವವರು

Solemnly affirmed / Sworn to before me this the 5th day of Dece 2015

No of Corrections one

Total No. of Corrections one only

Place Challakere Oath Commissioner

ಒ.ಎಸ್.ನಂ. 255/13 , ಪಿ.ಡಬ್ಲ್ಯು. 01
ದಿನಾಂಕ:-05.12.2015

ಸಾಕ್ಷಿಯನ್ನು ಪುನಃ ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ :- ಶ್ರೀ BKM ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆಸಿರುವ ಅಂಶಗಳು ಸರಿ ಹಾಗೂ ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ಮುಂದುವರೆದ ಮುಖ್ಯ ವಿಚಾರಣೆ :- ಸಮಯವನ್ನು ಕೋರಿದ್ದು ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ. ಸರಿಯಿದೆ.

ಸಿ. ಒ. ಬೋರಯ್ಯ

5/12/15

ಪ್ರಧಾನ ಸಿವಿಲ್ ನ್ಯಾಯಾಧೀಶರು,
ಚಳ್ಳಕೆರೆ.